**ಕರ್ನಾಟಕ ಸರ್ಕಾರ**
ವಾಣಿಜ್ಯ ತೆರಿಗೆಗಳ ಇಲಾಖೆ
**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ(ಆಡಳಿತ)**
**ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5,ವಿಟಿಕೆ-2, ರಾಜೇಂದ್ರನಗರ,**
**80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು-560047**
**ದೂರವಾಣಿ: 080-25706157 ಫ್ಯಾಕ್ಸ್: 080-25706175**

---

ಸಂಖ್ಯೆ.ಜಂಆ(ಆ)/ವಿಸಸೇತೆಕ-5/ಪಿ.ಪಿಆರ್-6/2018-19 ದಿನಾಂಕ: 24-08-2018

**ಟೆಂಡರ್ಅಧಿಸೂಚನೆ**

ವಿಷಯ: ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಈ ವಿಭಾಗದ ವಿವಿಧ ಕಚೇರಿಗಳಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 96 ಶಿವಾನೀ 2012, ಬೆಂಗಳೂರು, ದಿನಾಂಕ: 23-08-2012.
2. ಸುತ್ತೋಲೆ ಸಂಖ್ಯೆ.ವಿಹೆಚ್‌ಟಿ/ಸಿಆರ್-20/2013-14 ದಿನಾಂಕ: 30-09-2014.
3. ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು(ಕ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-7/2018-19, ದಿನಾಂಕ: 14-08-2018.

-000-

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ವಿಭಾಗದಲ್ಲಿ ತೆರಿಗೆ ಸಂಗ್ರಹಣೆ ಕಾರ್ಯ ಮತ್ತು ಆಡಿಟ್ ಕೆಲಸಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿಗಳ ಉಪಯೋಗಕ್ಕಾಗಿ ಬಾಡಿಗೆ ವಾಹನಗಳನ್ನು ಉಲ್ಲೇಖ(3)ರಂತೆ ಗರಿಷ್ಠ ಮಾಸಿಕ ಬಾಡಿಗೆ ರೂ.25,000-00ಗಳ ಮಿತಿಗೆ ಒಳಪಟ್ಟು ಗುತ್ತಿಗೆಯ ಆಧಾರದ ಮೇಲೆ ಪಡೆಯಲು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು ಅನುಮೋದಿಸಿರುತ್ತಾರೆ. ಆದ್ದರಿಂದ ಅರ್ಹತೆಯುಳ್ಳ ವಾಹನ ಮಾಲೀಕರೇ ಚಾಲಕರಾಗಿರುವ ವ್ಯಕ್ತಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಈ ಕೆಳಕಂಡ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ವಾಹನವನ್ನು ಒದಗಿಸಲು ಸೀಲ್ ಮಾಡಿದ ಲಕೋಟೆಯಲ್ಲಿ ಅರ್ಜಿಯನ್ನು ಖುದ್ದು ಸಲ್ಲಿಸಬಹುದಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನದ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಶೀವಾನಿ 2012, ದಿನಾಂಕ: 23.08.2012ರಲ್ಲಿ ತಿಳಿಸಿರುವ ನಿಯಮಗಳನ್ವಯ ವರ್ಷ **2014 ಮತ್ತು ನಂತರದ ಮಾದರಿಯ** ಹಳದಿ ಬಣ್ಣದ ಬೋರ್ಡ್ ಹೊಂದಿರುವ ಟ್ಯಾಕ್ಸಿ ವಾಹನಗಳ ಸೇವೆಯನ್ನು ಮಾತ್ರ ಪರಿಗಣಿಸಲಾಗುವುದು.

1. ಮುಚ್ಚಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.09.2018 ಸಮಯ: 5 ಘಂಟೆಯವರೆಗೆ.
2. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 14.09.2018
3. ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: 28.09.2018
4. ಟೆಂಡರ್‌ನ ಅವಧಿ: 01-10-2018 ರಿಂದ 30-09-2019.
5. ದಿನಾಂಕ: 01-10-2018 ರಿಂದ ಅನ್ವಯವಾಗುವಂತೆ ಈ ಹಿಂದೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸತತವಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಮಾಲೀಕ – ಕಂ- ಚಾಲಕರ ಸೇವೆಯನ್ನು ಪರಿಗಣಿಸುವುದಿಲ್ಲ.

ಈ ವಿಭಾಗಕ್ಕೆ ಅವಶ್ಯಕತೆಯಿರುವ ಸ್ಥಳಗಳು ಮತ್ತು ವಾಹನಗಳ ಸಂಖ್ಯೆ ಈ ಕೆಳಗಿನಂತಿದೆ.

| | | |
|---|---|---|
| 1. | ಬೆಂಗಳೂರು ನಗರದವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5ರ ಕ್ಷೇತ್ರವ್ಯಾಪ್ತಿ – | 13 |
| 2. | ದೊಡ್ಡಬಳ್ಳಾಪುರ – | 01 |
| 3. | ಚಿಕ್ಕಬಳ್ಳಾಪುರ – | 01 |

2) ವಾಹನದ ಪರವಾನಗಿಯ ದಿನಾಂಕ: 01-10-2018 ರಿಂದ 30-09-2019ರವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು. ವಾಹನದ ಮಾಡೆಲ್ 2014 ಮತ್ತು ನಂತರದ ವರ್ಷದ ಮಾಡೆಲ್‌ಗಳು ಅರ್ಹವಾಗಿರುತ್ತವೆ. ಈ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದ ಸುತ್ತಮುತ್ತಲಿನ ವಾಹನ ಚಾಲಕರುಗಳಿಗೆ, ಉತ್ತಮ ಸ್ಥಿತಿಯ ಮತ್ತು ಇತ್ತೀಚಿನ ಮಾಡೆಲ್ ವಾಹನಗಳಿಗೆ ಆದ್ಯತೆ ಕೊಡಲಾಗುವುದು.

3) ಈ ವಿಭಾಗದ ಮುಖ್ಯಸ್ಥರು ಕಛೇರಿಯ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ತಕ್ಷಣಕ್ಕೆ ಲಭ್ಯವಿರುವ ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾಹನದ ಗುಣಮಟ್ಟವನ್ನು ಮತ್ತು ಚಾಲನಾ ಕೌಶಲ್ಯವನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಯಾವುದೇ ಕಾರಣ ನೀಡದೆ ವಾಹನವನ್ನು ಬದಲಿಸುವ ಇಲ್ಲವೇ ನಿರಾಕರಿಸುವ ಹಕ್ಕು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಬೆಂಗಳೂರು ರವರಿಗೆ ಇರುತ್ತದೆ.

4) ವಾಣಿಜ್ಯ ತೆರಿಗೆ ಇಲಾಖೆಯು ಅಗತ್ಯವಿರುವ ವಾಹನಗಳನ್ನು ಇ-ಟೆಂಡರ್ ಮುಖಾಂತರ ಬಾಡಿಗೆಗೆ ಪಡೆದುಕೊಳ್ಳಲು ಇರುವ ತಾಂತ್ರಿಕ ಅಡಚಣೆಗಳ ಕಾರಣದಿಂದ ಪರ್ಯಾಯವಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ವಾಹನಗಳ ಸೇವೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೆ.ಟಿ.ಪಿ.ಪಿ.ಅಧಿನಿಯಮದ ನಿಯಮ 4(ಜಿ)ಗೆ ವೆಚ್ಚ 12/2014 ದಿನಾಂಕ: 16-05-2014ರಲ್ಲಿ ಸರ್ಕಾರವು ವಿನಾಯಿತಿಯನ್ನು ನೀಡಿರುತ್ತದೆ.

5) ಈ ವಿಭಾಗದ ಮುಖ್ಯಸ್ಥರಾದ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ **ಟೆಂಡರ್ ಸ್ವೀಕೃತಿ ಮತ್ತು ಒಪ್ಪಿಗೆ ಅಧಿಕಾರಿ** (Tender inviting and other accepting Authority) ಆಗಿರುತ್ತಾರೆ.

6) ಸಾಂಪ್ರದಾಯಿಕ ಟೆಂಡರ್ ಪ್ರಕ್ರಿಯೆಗೆ ಅನುಗುಣವಾಗಿ ದಿನಪತ್ರಿಕೆಯೊಂದರಲ್ಲಿ ಅಂದರೆ ಕನ್ನಡಪ್ರಭ ಪತ್ರಿಕೆ ಹಾಗೂ ಇಲಾಖೆ / ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

7) ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು.

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು– 2
2. ವಿಳಾಸದ ದಾಖಲೆ ಖಾಯಂ ಮತ್ತು ತಾತ್ಕಾಲಿಕ ವಾಸಸ್ಥಳದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ ಆಧಾರ್ ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ಪ್ಯಾನ್ ಕಾರ್ಡ್ ಪ್ರತಿ.
4. ಚಾಲನಾ ಪರವಾನಗಿ ಬ್ಯಾಡ್ಜ್
5. ವಾಹನದ ನೋಂದಣಿ ಪುಸ್ತಕದ ಪ್ರತಿ.
6. ವಾಹನದ ವಿಮಾ ಪಾಲಿಸಿಯ ಪ್ರತಿ.
7. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
8. ರೋಡ್ ಟ್ಯಾಕ್ಸ್ ಪಾವತಿಸಿರುವ ವಿವರ.
9. ಬ್ಯಾಂಕ್ ಅಕೌಂಟ್ ವಿವರಗಳು
10. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **ಖಾಸಗಿ ವಾಹನ ಮಾಲೀಕ-ಕಂ-ಚಾಲಕರ ಹೊರಗುತ್ತಿಗೆ ಸೇವೆ – ಸಲ್ಲಿಸಲು ಅರ್ಜಿ** ಎಂದು ನಮೂದಿಸುವುದು.
11. ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
12. ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಬೆಂಗಳೂರು ಇವರಿಗೆ ಕಾಯ್ದಿರಿಸಲಾಗಿದೆ.

8) ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿಯ ಮೇಲ್ಕಂಡ ವಿಳಾಸದಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮಸಂಖ್ಯೆ ನೀಡಲಾಗುವುದು.

**ದರಪಟ್ಟಿ ವಿವರ ಪ್ರತಿ ತಿಂಗಳು:**

**ಮೊದಲ 2,400 ಕಿ.ಮೀ. ಗರಿಷ್ಠ ರೂ.25,000-00 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)**

**ನಂತರದ ಪ್ರತಿ ಕಿ.ಮೀ. ರೂ.5.50-00 (ಐದು ರೂಪಾಯಿ ಐವತ್ತು ಪೈಸೆಗಳು ಮಾತ್ರ)**

**(ವಿಶೇಷ ಸಂದರ್ಭಗಳಲ್ಲಿ ಮಾತ್ರ) 300 ಘಂಟೆಯ ನಂತರ ಪ್ರತಿ ಘಂಟೆಗೆ ರೂ.40-00 (ನಲವತ್ತು ರೂಪಾಯಿಗಳು ಮಾತ್ರ)**

9) ಆಯ್ಕೆಯಾದ ವಾಹನಗಳ ಚಾಲಕರುಗಳು ಈ ಕೆಳಕಂಡ ಷರತ್ತುಗಳಿಗೂ ಒಳಪಟ್ಟಿರುತ್ತಾರೆ.

**1)** ಅನಾರೋಗ್ಯವು ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಒಂದು ತಿಂಗಳಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸಿರುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದಿದ್ದರೆ ಗೈರು ಹಾಜರಿ ಎಂದು

ಪರಿಗಣಿಸಿ ಆ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು (ಬದಲಿ ವಾಹನದ ವ್ಯವಸ್ಥೆಗೆ ಪ್ರತ್ಯೇಕವಾದ ಬಾಡಿಗೆ ನೀಡುವುದಿಲ್ಲ).

2) ಮಾಸಿಕ ಬಾಡಿಗೆ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಕರಾರಿನಲ್ಲಿರುವ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.

3) ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಚಾಲಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಲ್ಲಿಸುವಾಗ ಸಂಬಂಧಿಸಿದ ವಾಹನದ ಲಾಗ್‌ಪುಸ್ತಕದ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

4) ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ: 01-10-2018 ರಿಂದ 30-09-2019ರವರೆಗೆ ಇರುತ್ತದೆ. ಅಗತ್ಯವಿದ್ದರೆ ಇದೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಜಂಟಿ ಆಯುಕ್ತರ ಲಿಖಿತ ಇಚ್ಛೆಯ ಮೇರೆಗೆ ಮುಂದುವರಿಸಬಹುದಾಗಿದೆ. ಅಲ್ಲದೆ ಅವಧಿಗೆ ಮುನ್ನಾ ಸಹ ಯಾವುದೇ ನೋಟೀಸ್ ನೀಡದೆ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಿಗೆ ಇರುತ್ತದೆ.

5) ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತ: ಮಾಲೀಕ/ಚಾಲಕರೇ ಜವಾಬ್ದಾರರಾಗಿರುತ್ತಾರೆ.

6) ಈ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" ಮೀಸಲಿಡತಕ್ಕದ್ದು.

7) ಮೇಲಿನ ಯಾವುದಾದರೂ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷ್ಯಿಸಿರುವುದು ಕಂಡು ಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರ ಗುತ್ತಿಗೆ ಆಧಾರದ ಕರಾರನ್ನು ರದ್ದು ಪಡಿಸಲಾಗುವುದು.

(ಸಿ.ಎನ್.ಶಿವ ಪ್ರಕಾಶ್)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5,
ಬೆಂಗಳೂರು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)
ವಿ.ಸ.ಸೇ.ತೆ.ಕ-5, ಬೆಂಗಳೂರು-47